



ಗೋಣಿ ಚೀಲದ ತಯಾರಿಕೆ ನಡೆಯುತ್ತದೆ. ಕೈಚೀಲ, ಪರ್ಸು, ತರಕಾರಿ ತರುವ ಬ್ಯಾಗು, ಮಕ್ಕಳ ಆಟಿಕೆಗಳೂ ಸೆಣಬಿನಿಂದ ತಯಾರಾಗುತ್ತವೆ.

ಮೊದಲೆಲ್ಲ ಒಂದು ಟನ್ ಸೆಣಬಿಗೆ 30ರಿಂದ 40 ಸಾವಿರ ರೂಪಾಯಿ ಸಿಗುತ್ತಿತ್ತು. ಆ ಬೆಲೆಯೀಗ 20–25 ಸಾವಿರ ರೂಪಾಯಿಗೆ ಕುಸಿದಿದೆ. ಬೆಳೆ ಬೆಳೆಯಲು ಮಾಡಿದ ಖರ್ಚೂ ಹಿಂತಿರುಗಿ ಬರುವುದಿಲ್ಲ ಎಂಬ ಕಾರಣದಿಂದ ಅನೇಕರು ಸೆಣಬು ಕೃಷಿಯನ್ನು ನಿಲ್ಲಿಸುತ್ತಿದ್ದಾರೆ ಅಥವಾ ಅದನ್ನು ಕೈ ಬಿಟ್ಟು ತೋಟಗಾರಿಕಾ ಬೆಳೆಗಳತ್ತ ಮುಖ ಮಾಡಿದ್ದಾರೆ. ಸೆಣಬಿನ ಬೆಲೆ ಕುಸಿದಾಗ 'ಕನಿಷ್ಠ ಬೆಂಬಲ ಬೆಲೆ' ನಿಗದಿ ಮಾಡಿಕೊಳ್ಳುವ ವ್ಯವಸ್ಥೆ ಕಲ್ಪಿಸಬೇಕಾದ 'ಜ್ಯೂಟ್ ಕಾರ್ಪೊರೇಷನ್ ಆಫ್ ಇಂಡಿಯಾ' (ಭಾರತ ಸೆಣಬು ನಿಗಮ) ರೈತರ ಸಹಾಯಕ್ಕೆ ನಿಂತ ಸಂದರ್ಭ ತೀರಾ ಕಡಿಮೆ.

ಆಹಾರ ಧಾನ್ಯಗಳನ್ನು ಗೋಣಿ ಚೀಲದಲ್ಲಿಯೇ ಶೇಖರಿಸಿಡಬೇಕು ಎಂಬ ನಿಯಮವಿದೆ. ಇದರ ಆಧಾರದಲ್ಲಿ ಸರ್ಕಾರವೇ ಖುದ್ದು ಆದೇಶಗಳನ್ನು ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಸೆಣಬಿನ ಚೀಲಗಳನ್ನು ಕೊಳ್ಳುತ್ತದೆ. 2017ರ ಕಾಯಿದೆಯ ಪ್ರಕಾರ, ಆಹಾರ ಧಾನ್ಯಗಳನ್ನು ಕೇವಲ ಸೆಣಬಿನ ಚೀಲಗಳಲ್ಲಿ ಮತ್ತು ಉತ್ಪಾದನೆಯಾಗುವ ಸಕ್ಕರೆಯ ಶೇ. 20ರಷ್ಟನ್ನು ಸೆಣಬಿನ ಚೀಲಗಳಲ್ಲಿ ತುಂಬಬೇಕು. ಇದರಿಂದಾಗಿ ಸೆಣಬಿನ ಕಾರ್ಖಾನೆಗಳು ತಯಾರಿಸುವ ಚೀಲಗಳ ಪೈಕಿ ಶೇ. 75ರಷ್ಟು ಇದಕ್ಕೇ ಬಳಕೆಗೊಳ್ಳುತ್ತವೆ. ಗೋಣಿಚೀಲಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೊಳ್ಳುವ ಸರ್ಕಾರವು ರೈತರ ನೆರವಿಗೆ ಪರೋಕ್ಷವಾಗಿ ನಿಲ್ಲುತ್ತದೆ.

ದೇಶದಲ್ಲಿ ತಯಾರಾಗುವ ಶೇ. 90ರಷ್ಟು ಸೆಣಬಿನ ಚೀಲಗಳು ಭಾರತ ಸರ್ಕಾರಿ ಸ್ವಾಮ್ಯದ 'ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ'ಗೆ ಸರಬರಾಜಾಗುತ್ತವೆ. ಅಲ್ಲಿಂದ ರಾಜ್ಯಗಳ ಆಹಾರ ನಿಗಮಗಳಿಗೆ ತಲುಪುತ್ತವೆ. ಪ್ರತಿ ವರ್ಷ 8000 ಕೋಟಿ ರೂಪಾಯಿ ಮೌಲ್ಯದ ಗೋಣಿ ಚೀಲಗಳನ್ನು ಸೆಣಬಿನ ವಿವಿಧ ಮಿಲ್ಲುಗಳಿಂದ ಸರ್ಕಾರ ಖರೀದಿಸುತ್ತದೆ. ಯಾವಾಗ ನಮ್ಮ ಬೆಳೆಯುವ ಪ್ರಮಾಣ ಮತ್ತು ಚೀಲಗಳ ಉತ್ಪಾದನೆ ಕಡಿಮೆಯಾಯಿತೋ, ಪಕ್ಕದ ಬಾಂಗ್ಲಾದೇಶದಲ್ಲಿ ಸೆಣಬಿನ ಬೆಳೆ ಮತ್ತು ಉತ್ಪನ್ನ ಎರಡೂ ಏರಿಕೆ ಕಂಡಿದೆ. ಇಡೀ ವಿಶ್ವದಲ್ಲಿ ಒಟ್ಟು ಬೆಳೆಯ ದೃಷ್ಟಿಯಿಂದ ಭಾರತವೇ ನಂಬರ್ ವನ್ ಎನಿಸಿದ್ದರೂ, ಎಕರೆಗನುಗುಣವಾಗಿ ಪರಿಗಣಿಸಿದರೆ ಬಾಂಗ್ಲಾದೇಶ ನಮ್ಮನ್ನು ಹಿಂದಿಕ್ಕುತ್ತದೆ. ವಿಶ್ವದ ಸೆಣಬಿನ ರಫ್ತು ವ್ಯವಹಾರದಲ್ಲಿ ಬಾಂಗ್ಲಾದೇಶದ ಪಾಲು ಶೇ. 75ರಷ್ಟಿದ್ದರೆ ನಮ್ಮ ಪಾಲು ಕೇವಲ ಶೇ. 7 ಮಾತ್ರ. ದುರಂತವೆಂದರೆ ನಾವೇ ಅಲ್ಲಿಂದ ಸೆಣಬಿನ ಉತ್ಪನ್ನ ಖರೀದಿಸುತ್ತಿದ್ದೇವೆ. 2020–21ರಲ್ಲಿ ಸುಮಾರು 1123 ಕೋಟಿ ರೂಪಾಯಿ ಮೌಲ್ಯದ ಸೆಣಬಿನ ಉತ್ಪನ್ನ ಬಾಂಗ್ಲಾದೇಶದಿಂದ ಇಲ್ಲಿಗೆ ಬಂದಿದೆ.

## ಸೆಣಬಿನ ಹೊಳಪಿಗೆ ಹರಿಯುವ ನೀರು

ಬಾಂಗ್ಲಾದಿಂದ ಬರುವ ಸೆಣಬಿನ ಉತ್ಪನ್ನದ

## ವಿಶ್ವದ ಅತಿದೊಡ್ಡ ಗೋಣಿಚೀಲ

2021ರಲ್ಲಿ ಪಶ್ಚಿಮ ಬಂಗಾಳದ ಕೋಲ್ಕತ್ತಾನಗರದ 'ರಕ್ಷಕ್ ಫೌಂಡೇಷನ್' ಎಂಬ ಸ್ವಯಂ ಸೇವಾಸಂಸ್ಥೆ ಮತ್ತು 'ರೂಟ್ ಟು ಜೂಟ್ ಪ್ರೈವೇಟ್ ಲಿಮಿಟೆಡ್' ಕಂಪನಿಯ ಮುಖ್ಯಸ್ಥರಾದ ಚೈತಾಲಿ ದಾಸ್ ಎಂಬ ಸೆಣಬು ಉದ್ಯಮಿಯು ವಿಶ್ವದ ಅತಿ ದೊಡ್ಡ ಗೋಣಿಚೀಲವನ್ನು ತಯಾರಿಸಿದ್ದರು. 24.87 ಮೀಟರ್ ಉದ್ದ ಮತ್ತು 6.3 ಮೀಟರ್ ಅಗಲವಿದ್ದ ಆ ಗೋಣಿಚೀಲದ ಸುತ್ತಳತೆ 30.68 ಮೀಟರ್‌ನಷ್ಟಿತ್ತು. ಇದು ಅದುವರೆಗೆ ವಿಶ್ವದಲ್ಲಿ ತಯಾರಾದ ಅತ್ಯಂತ ದೊಡ್ಡ ಗೋಣಿಚೀಲ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಗಿನ್ನೆಸ್ ದಾಖಲೆಯ ಪುಸ್ತಕವನ್ನು ಸೇರಿರುವ ಗೋಣಿಚೀಲ ತಯಾರಿಸಲು ಎಂಟು ಜನರ ಮಹಿಳಾ ತಂಡವು ಒಂದೂವರೆ ತಿಂಗಳ ಕಾಲ ದುಡಿದಿತ್ತು. ಮಾಡಿದ ತಪ್ಪಿಗಾಗಿ 'ಸುಧಾರಣಾ ಕೇಂದ್ರ'ದಲ್ಲಿದ್ದ ನಾಲ್ಕು ಜನ ಮಹಿಳೆಯರು ಆ ತಂಡದಲ್ಲಿದ್ದರು. ಎಂಟು ಅಂತಸ್ತಿನ ಮನೆಯ ಎತ್ತರದಷ್ಟಿದ್ದ ಗೋಣಿಚೀಲವು 14 ಟೆನ್ನಿಸ್ ಕೋರ್ಟ್‌ಗಳನ್ನು ಮುಚ್ಚುವಷ್ಟು ದೊಡ್ಡದಾಗಿತ್ತು. 300 ಆನೆಗಳನ್ನು ಅದರಲ್ಲಿ ತುಂಬಬಹುದಾಗಿತ್ತು.

ಜೂಟ್ ಫಾರ್ ಕ್ಲೈಮೇಟ್ ಆ್ಯಕ್ಷನ್ ಚಿಂತನೆಯ ಹಿನ್ನೆಲೆಯಲ್ಲಿ ಅಷ್ಟು ದೊಡ್ಡ ಗೋಣಿಚೀಲವನ್ನು ತಯಾರಿಸಿದ್ದ ಕಂಪನಿಯು – ಜನ ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ನಿಲ್ಲಿಸಿ, ಸೆಣಬಿನಿಂದ ತಯಾರಾದ ಕೈಚೀಲಗಳ ಬಳಕೆ ಶುರು ಮಾಡಬೇಕು ಎಂಬ ಆಶಯದೊಂದಿಗೆ ಇಡೀ ವಿಶ್ವದ ಗಮನ ಸೆಳೆದಿತ್ತು.

ಪರಿಸರಕ್ಕೆ ಅಪಾಯಕಾರಿಯಾಗಿರುವ ಪ್ಲಾಸ್ಟಿಕ್ ಕೈಚೀಲಗಳ ಬಳಕೆಯನ್ನು ತ್ಯಜಿಸಿ, ಸೆಣಬಿನ ಕೈಚೀಲಗಳ ಕಡೆ ಜನರನ್ನು ಆಕರ್ಷಿಸಲು ಇಂಥ ಪ್ರಯತ್ನಗಳು ದೇಶಾದ್ಯಂತ ನಡೆಯುತ್ತಿವೆ. ಬೆಂಗಳೂರಿನ ಸೌರವ್ ಮೋದಿ ಎಂಬುವರು 'ಜಸ್ಟ್ ಜೂಟ್' ಎಂಬ ಸೆಣಬಿನ ಚೀಲ ತಯಾರಿಕೆಯ ಉದ್ಯಮ ಪ್ರಾರಂಭಿಸಿದ್ದು, ವಾರ್ಷಿಕ ಏಳು ಕೋಟಿ ರೂಪಾಯಿ ವಹಿವಾಟು ನಡೆಸುತ್ತಿದ್ದಾರೆ. ಕೈಚೀಲ, ಬೆಲ್ಟು, ಪರ್ಸು, ಫೈಲ್ ಮತ್ತು ಕಾರ್ಪೊರೇಟ್ ಉಡುಗೊರೆಗಳನ್ನು ತಯಾರಿಸುತ್ತಾರೆ. ಬೆಂಗಳೂರಿನ ಕ್ರೈಸ್ಟ್ ಕಾಲೇಜಿನಲ್ಲಿ ಕಾಮರ್ಸ್ ಪದವಿ ಓದಿದ್ದ ಸೌರವ್ ನವೋದ್ಯಮ ಸ್ಥಾಪಿಸುವವರಿಗೆ ಮಾದರಿಯಂತಿದ್ದಾರೆ.

ಚೈತಾಲಿ ಅವರ ಸಾಧನೆಯ ಮಾದರಿಯಲ್ಲಿಯೇ ಕೊಯಂಬತ್ತೂರಿನ ದೃಷ್ಟಿದೋಷವಿರುವ ಒಂಬತ್ತು ಜನ 'ಯುವ ಫೌಂಡೇಷನ್' ನೇತೃತ್ವದಲ್ಲಿ 66 ಅಡಿ ಎತ್ತರ ಮತ್ತು 33 ಅಡಿ ಸುತ್ತಳತೆಯ ಹಿಡಿಕೆ ಇಲ್ಲದ ಗೋಣಿಚೀಲವನ್ನು ತಯಾರಿಸಿ ದಾಖಲೆ ಮಾಡಿದ್ದರು.